No: A3/Land/CR-40/Building Stone Quarry/2023-24
Proposal No: FP/KA/QRY/126997/2021

ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ
ಮಂಗಳೂರು ವೃತ್ತ, ಮಂಗಳೂರು
ಮಂಗಳೂರು-07, ದಿನಾಂಕ: 19.02.2024

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವಿಭಾಗ,
ಮಂಗಳೂರು.

ವಿಷಯ: Diversion of 0.9737 ha. of forest land in Sy.No. 124 of Mani Nalkuru of Bantwal Taluk D.K. District, Mangaluru Division for carrying out building stone quarrying in favour of Mervyn M Goveas, Falnir Gardens, Kankanady Post Mangaluru (T) D.K. District.

ಉಲ್ಲೇಖ: Letter No:LND/CR-30/FC Quarry & Approach Road/2021-22/7020 Date: 09.02.2024 of the Deputy Conservator of Forest, Mangalore Division, Mangalore.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ನಿಮ್ಮ ಕಚೇರಿ ಪತ್ರದಲ್ಲಿ, ಮರ್ವಿನ್ ಎಂ ಗೋವಸ್, ಫಳ್ನೀರ್ ರೋಡ್ ಮಂಗಳೂರು ಇವರು ಕಲ್ಲುಗಣಿಗಾರಿಕೆಯ ಉದ್ದೇಶಕ್ಕಾಗಿ ಮಣಿ ನಾಲ್ಕೂರು ಬಂಟ್ವಾಳ ತಾಲೂಕಿನ ಸರ್ವೆ ನಂ 124ರಲ್ಲಿ 0.9737 ಹೆ ಅರಣ್ಯ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಬಿಡುಗಡೆಗೊಳಿಸಲು ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕೆಳಗಿನ ಕೆಲವೊಂದು ಅಂಶಗಳನ್ನು ಉಲ್ಲೇಖಿಸದೆ ಇರುವುದು ಕಂಡುಬಂದಿರುತ್ತದೆ.

1. ಮಣಿ ನಾಲ್ಕೂರು ಮೀಸಲು ಅರಣ್ಯದ ಒಟ್ಟು ವಿಸ್ತೀರ್ಣ.
2. ಉಪಯೋಗಿ ಸಂಸ್ಥೆಯವರು ನಡೆಸಲು ಉದ್ದೇಶಿಸಿರುವ ಕಲ್ಲುಗಣಿಗಾರಿಕೆಯ ಪ್ರದೇಶದ ಒಟ್ಟು ವಿಸ್ತೀರ್ಣ, ಸದ್ರಿ ಕಲ್ಲುಗಣಿಗಾರಿಕೆಯನ್ನು ನಡೆಸಲು ಉದ್ದೇಶಿಸಿರುವ ಪ್ರದೇಶದ ಸ್ವರೂಪ ಹಾಗೂ ಅದರ ಸುತ್ತ ಮುತ್ತ ಇರುವ ಜಮೀನಿನ ಸ್ವರೂಪವನ್ನು ತಿಳಿಸಿರುವುದಿಲ್ಲ.
3. ಮಣಿ ನಾಲ್ಕೂರು ಮೀಸಲು ಅರಣ್ಯದಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದವರಿಗೆ ಗುತ್ತಿಗೆ ನೀಡಿರುವ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ಹಾಗೂ ಯಾವ ವರ್ಷದಲ್ಲಿ ನಿಗಮದವರಿಗೆ ಗುತ್ತಿಗೆ ನೀಡಲಾಗಿದೆ.
4. ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದವರಿಂದ ಅಭಿಪ್ರಾಯ ಪಡೆದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಪ್ರಸ್ತಾವನೆಯಲ್ಲಿ ಸಲ್ಲಿಸಿರುವುದಿಲ್ಲ.
5. ಪ್ರಸ್ತಾವನೆಯಲ್ಲಿ ಉದ್ದೇಶಿಸಿರುವ ಕಲ್ಲುಗಣಿಗಾರಿಕೆಯ ಪ್ರದೇಶದ ಸುತ್ತಮುತ್ತ ಶಾಲೆ, ಆಸ್ಪತ್ರೆ ಹಾಗೂ ಜನವಸತಿ ಪ್ರದೇಶಗಳಿಗೆ ಇರುವ ದೂರದ ಬಗ್ಗೆ ನಮೂದಿಸಿರುವುದಿಲ್ಲ.

ಆದ್ದರಿಂದ ಈ ಮೇಲೆ ನಮೂದಿಸಿರುವ ಅಂಶಗಳ ಬಗ್ಗೆ ಪುನಃ ಪರಿಶೀಲಿಸಿ, ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಮರು ಸಲ್ಲಿಸಲು ಸೂಚಿಸುತ್ತಾ, ಉಲ್ಲೇಖಿತ ಪತ್ರದ ಪ್ರತಿ ಹಾಗೂ ಪ್ರಸ್ತಾವನೆಯ ಮೂಲ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಹಿಂದುರುಗಿಸಿದೆ.

ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವೃತ್ತ, ಮಂಗಳೂರು

E:\land section new\A3 section\A3\A3 Letter Lower 09.06.2023..1.docx